ಪರಿಸ್ಥಿತಿ ಇದೆ. ಬೇರೆ ಬೇರೆ ಬೇಡಿಕೆಯನ್ನು ಇಟ್ಟು ಅವರು ಈಗ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಸರ್ಕಾರವು ಇವತ್ತು ಅವರಿಗೆ ಕಡೆಯ ಪಕ್ಷ ಬೇಸಿಕ್ ಆಗಿ ಗೌರವಧನವನ್ನು ನಿಗದಿಪಡಿಸಬೇಕು. ಅವರಿಗೆ incentive ಕೊಡುವುದು ಕೂಡ ಜಾಸ್ತಿಯಾಗಬೇಕಾಗಿದೆ. ಇದರ ಜೊತೆಯಲ್ಲಿ ಏನು ಸಮಸ್ಯೆ ಎಂದರೆ, ಅಲ್ಲಿ ಯಾರು ಗರ್ಭಿಣಿಯರು ಇದ್ದಾರೆ ಅವರು 8 ತಿಂಗಳ ಕಾಲ ಮನೆಯಲ್ಲಿಯೇ ಇರುತ್ತಾರೆ. ಹೆರಿಗೆ ಆಗುವ ಸಮಯದಲ್ಲಿ ಅವರು ತಾಯಿಯ ಮನೆಗೆ ಹೋಗುತ್ತಾರೆ. ಮತ್ತೆ ಇವರ incentive cut ಆಗುತ್ತದೆ. ಅಲ್ಲಿ ಸಣ್ಣಪುಟ್ಟ technical ಸಮಸ್ಯೆಗಳು ಇವೆ. ಅವರು ಸ್ವಾಭಿಮಾನದಿಂದ ಜೀವನ ಮಾಡುವುದಕ್ಕೆ ಅವಕಾಸವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತು ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಆರ್.ಅಶೋಕ್ (ಉಪಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಆಶಾ ಕಾರ್ಯಕರ್ತರ ವಿವಿಧ ಬೇಡಿಕೆಗಳ ಬಗ್ಗೆ ಪ್ರತಿಭಟನೆ ಮಾಡುತ್ತಿರುವುದು. ಅವರಿಗೆ ನಮ್ಮ ಪೊಲೀಸರಿಂದ ಏನೂ ತೊಂದರೆಯಾಗಿರುವುದಿಲ್ಲ. ಅವರ ಕೆಲವು ಬೇಡಿಕೆಗಳು ಏನಿವೆ ಅವುಗಳನ್ನು ಈಡೇರಿಸಬೇಕೆಂದು ನಾನು ಈ ಹಿಂದೆ ಆರೋಗ್ಯ ಸಚಿವನಾಗಿ ಕೆಲಸವನ್ನು ಮಾಡಿದ್ದೇನೆ. ಆ ಸಂದರ್ಭದಲ್ಲಿ ಆಶಾ ಕಾರ್ಯಕರ್ತರನ್ನು ನೇಮಕ ಮಾಡಿದ್ದೆವು. ಅವರ ಸಮಸ್ಯೆಗಳು ಏನಿವೆ ಎಂಬ ಬಗ್ಗೆ ನಾನು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸರ್ಕಾರವು ಕೂಡಲೇ ಕ್ರಮವನ್ನು ಕೈಗೊಳ್ಳುತ್ತದೆ.

ಅಧ್ಯಕ್ಷರು : ಶ್ರೀ ಸೈಯದ್ ಯಾಸೀನ್‌ರವರು ಸದನದಲ್ಲಿಲ್ಲ. ಶ್ರೀ ಸುನೀಲ್ ಹೆಗಡೆಯವರೆ ತಾವು ಕೇಳಿ.

7. ವಿಷಯ : ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ.

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) : ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಉತ್ತರ ಕನ್ನಡ

ಜಿಲ್ಲೆಯ ಹಳಿಯಾಳ ವಿಧಾನಸಭಾ ಕ್ಷೇತ್ರದಲ್ಲಿ ದಾಂಡೇಲಿ ಎನ್ನುವ ನಗರಕ್ಕೆ ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ತಾಲ್ಲೂಕಾ ಅಥವಾ ತಾಲ್ಲೂಕು ಕೇಂದ್ರವಾ?

ಶ್ರೀ ಸುನೀಲ್ ಎ ಹೆಗಡೆ : ತಾಲ್ಲೂಕಾಗಿ ಮಾಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು same ಉತ್ತರ ಕೊಟ್ಟಿದ್ದಾರಲ್ಲಾ?

ಶ್ರೀ ಸುನೀಲ್ ಎ ಹೆಗಡೆ : ಹುಂಡೇಕಾರ್ ಸಮಿತಿಯಿಂದ ದಾಂಡೇಲಿಯನ್ನು ತಾಲ್ಲೂಕು ಮಾಡಬೇಕೆಂದು ಇತ್ತು. ಇದಾದ ನಂತರ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಇದ್ದಾಗ ಶ್ರೀ ಜಗದೀಸ್ ಶೆಟ್ಟರ್‌ರವರು Revenue Minister ಇದ್ದಾಗ ಅಲ್ಲಿ strike ನಡೆದಾಗ ಅವರೆ ಸ್ವತಃ ಬಂದು ದಾಂಡೇಲಿಯನ್ನು ತಾಲ್ಲೂಕಾಗಿ ಮಾಡುತ್ತೇವೆ ಯಾವುದೇ ತೊಂದರೆ ಇಲ್ಲ ಎಂದು ಹೇಳಿಹೋಗಿದ್ದರು. ಆದರೆ ಮೊನ್ನೆ ದಿನ ತಾಲ್ಲೂಕುಗಳ ಘೋಷಣೆಯಾಗಬೇಕಾದರೆ ದಾಂಡೇಲಿ ತಾಲ್ಲುಕು ಆಗಲಿಲ್ಲ. ಇವತ್ತಿನದಿನ ದಾಂಡೇಲಿಯಲ್ಲಿ ಬಂದ್ ಮಾಡಿರುವುದು ಟಿ.ವಿ.ಯಲ್ಲಿ ಬರುತ್ತಿದೆ. ಎಂಎಲ್‌ಎಗಳ ಬಗ್ಗೆ ಘೋಷಣೆಯನ್ನು ಕೂಗುತ್ತ ತಾಲ್ಲೂಕು ಆಗಲಿಲ್ಲವೆನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಎಂಎಲ್‌ಎಗಳು ವಿಧಾನಸಭೆಯಲ್ಲಿ ಚರ್ಚೆ ಮಾಡುವುದಿಲ್ಲ. ಈ ಬಗ್ಗೆ ಸರ್ಕಾರದ ಮೇಲೆ ಒತ್ತಡ ಹಾಕುವುದಿಲ್ಲ ಎನ್ನುವುದು ಇದೆ. ಅಲ್ಲಿ ಜಾಸ್ತಿ ಕಾರ್ಮಿಕರು ಇರುವುದರಿಂದ ತಾಲ್ಲೂಕು ಆಗುವುದು ಅವಶ್ಯಕತೆ ಇರುವುದರಿಂದ ಖಂಡಿತವಾಗಿ ಇದನ್ನು ಮಾಡಬೇಕು. ಇದಕ್ಕೆ ಪಾಸಿಟಿವ್ ಆಗಿ ಸರ್ಕಾರವು ಉತ್ತರ ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಲ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೆ ನಾನು ಮಾನ್ಯ ಸದಸ್ಯರುಗಳಾದ ಶ್ರೀ ಗೋಪಾಲ ಭಂಡಾರಿಯವರಿಗೆ, ಶ್ರೀ ಅಭಯಚಂದ್ರರವರಿಗೆ ಹಾಗೂ ಶ್ರೀ ಟಿ.ಬಿ.ಜಯಚಂದ್ರರವರಿಗೆ ಉತ್ತರ ಕೊಟ್ಟ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು 43 ತಾಲ್ಲೂಕುಗಳನ್ನು ಘೋಷಿಸಿದ್ದಾರೆ. ಇನ್ನು ಯಾವ ಯಾವ ತಾಲ್ಲೂಕುಗಳು ಆಗಬೇಕೆಂದು

ಬೇಡಿಕೆ ಬರುತ್ತದೆ ಅದನ್ನು ಪರಿಶೀಲನೆ ಮಾಡಿ ಮಾನ್ಯಮಂತ್ರಿಗಳು ಸೂಕ್ತ ಉತ್ತರವನ್ನು ಕೊಡುತ್ತಾರೆ.

ಶ್ರೀ ಎನ್.ಸಂಪಂಗಿ : ಮಾನ್ಯ ಅಧ್ಯಕ್ಷರೆ, ನಮ್ಮ ಬಾರಿಗೆ ಬಾಗೇಪಲ್ಲಿ–ಯದನ್ನೂ ಸಹ ಸೇರಿಸಿ.

ಅಧ್ಯಕ್ಷರು : ಆಯಿತು. ಶ್ರೀ ಗೂಳಿಹಟ್ಟಿಶೇಖರ್‌ರವರು ತಾವು ಕೇಳಿ.

8. ವಿಷಯ : ಭದ್ರಾ ಮೇಲ್ಕಂಡೆ ಏತ ನೀರಾವರಿ ಯೋಜನೆಯ ಪ್ಯಾಕೇಜ್–2 ರ ಕಾಮಗಾರಿಯಲ್ಲಿ ಕೆ.ಟಿ.ಪಿ.ಪಿ ಆಕ್ಟ್‌ನ್ನು ಉಲ್ಲಂಘಿಸಿರುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ ಶೇಖರ್ : ಮಾನ್ಯ ಅಧ್ಯಕ್ಷರೆ, Upper Bhadra lift irrigation package 2ರ ಕಾಮಗಾರಿ KTPP Act ಉಲ್ಲಂಘಿಸಿ ಒಂದು ಕಂಪನಿಗೆ ಟೆಂಡರ್ ಕೊಟ್ಟಿದ್ದಾರೆ. ಅದರಲ್ಲಿ ಸುಮಾರು ಮೂರು ಜನ ಬಿಡ್‌ದಾರರು ಇದ್ದರೆ ಒಬ್ಬರು 1020 ಕೋಟಿ ರೂಪಾಯಿಗಳಿಗೆ ಟೆಂಡರ್ ಹಾಕಿಕೊಂಡಿದ್ದರೆ 1032 ಕೋಟಿ ರೂಪಾಯಿ ಹಾಕಿದವರಿಗೆ ಪ್ಯಾಕೇಜ್ ಟೆಂಡರ್ ಅನ್ನು ಕೊಟ್ಟಿದ್ದಾರೆ. ಅದನ್ನು ಆಥಿಕ ಬಿಡ್ ಮತ್ತು technical bid ಕೊಡುವಂತಹ ಸಂದರ್ಭದಲ್ಲಿ ಮೂರು ಸದಸ್ಯರ ಕಮಿಟಿ ಎಂದು ಮಾಡಿದ್ದಾರೆ. ಆ ಮೂರು ಜನರ ಕಮಿಟಿಯಲ್ಲಿ ಅಧ್ಯಕ್ಷರಾದವರು L–1 ನ1032 ಕೋಟಿ ರುಪಾಯಿಗೆ ಹಾಕಿಕೊಂಡವರ favour ಆಗಿ ಮಾಡಿದ್ದಾರೆ. ಇನ್ನು ಇಬ್ಬರು ಸದಸ್ಯರಿದ್ದರಲ್ಲ ಅವರು ಯಾರು ಕಡಿಮೆಗೆ ಹಕಿದ್ದಾರೆ ಅವರಿಗೆ favour ಆಗಿ ಮಾಡಿದ್ದಾರೆ. ಇದರಲ್ಲಿ ಒಂದು ನಮಗೆ ಸಂಶಯ ಬರುವುದು ಎಂದರೆ ಯಾರು L-1 ಎಂದು ಹೇಳಿ 1032 ಕೋಟಿ ರೂಪಯಿಗೆ highest ಬಿಡ್ ಮಾಡಿರುವವರಿಗೆ ಕೊಟ್ಟಿದ್ದಾರೆ. ಆಗ ಯಾರು ಅಧ್ಯಕ್ಷರು ಇದ್ದರು ಆ ಅಧ್ಯಕ್ಷರಿಗೆ ಬಿಡಿಎಯಿಂದ ಒಂದು ಫಲಪ್ರದವಾಗಿ ಸೈಟ್ ಕೊಟ್ಟಿದ್ದಾರೆ. ಇವತ್ತು ಎಂಎಲ್‌ಎಗಳಿಗೂ ಹಾಗೂ ಮಂತ್ರಿಗಳಿಗೂ ಕೂಡ 'ಜಿ' ಕ್ಯಾಟಗಿರಿಯಲ್ಲಿ ಸೈಟ್ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇದರಲ್ಲಿ 1032 ಕೋಟಿ ರೂಪಾಯಿಗಳಿಗೆ Highest quote ಮಾಡಿದವರಿಗೆ ಟೆಂಡರ್ ಕೊಡಿಸಿರುವುದಕ್ಕೆ ಬಳುವಳಿಕೆಯಾಗಿ ಈ ಬಿಡಿಎ ಸೈಟ್ ಅನ್ನು ಕೊಟ್ಟಿದ್ದಾರೆ. ಅವರಿಗೆ 103 ಕೋಟಿ ರೂಪಾಯಿಗಳ mobilization advance